# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ
## SC CRIMINAL : 60/2020

**ಪ್ರಾ.ಸಾ. 17**

**ದೋ.ಸಾ. 34**

| | | |
|---|---|---|
| ಸಾಕ್ಷಿಯ ಹೆಸರು | : | ರಾಘವೇಂದ್ರ ಎಂ ಬೈಂದೂರು |
| ತಂದೆಯ ಹೆಸರು | : | ಲೇಟ್ ನಾರಾಯಣ ಎಂ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಪೊಲೀಸ್ ಇನ್ಸ್ ಪೆಕ್ಟರ್, ಕಾವೂರು ಪೊಲೀಸ್ ಠಾಣೆ, ಮಂಗಳೂರು |
| ವಾಸ | : | ಮಂಗಳೂರು |

**ದಿನಾಂಕ 04.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1). ದಿನಾಂಕ 17.10.2019 ರಿಂದ 30.06.2020 ವರೆಗೆ ಮಂಚೇನಹಳ್ಳಿ ಪೊಲೀಸ್ ಠಾಣೆಯಲ್ಲಿ ಆರಕ್ಷಕ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2). ದಿನಾಂಕ 09.01.2020 ರಂದು ಮಧ್ಯಾಹ್ನ 12.00 ಗಂಟೆಗೆ ಫಿರ್ಯಾದಿದಾರರಾದ ಚಾಸಾ–1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ, ಠಾಣಾ ಮೊಕದ್ದಮೆ ಸಂಖ್ಯೆ:10/2020 ಕಲಂ 354(ಡಿ), 306 of IPC ರೀತ್ಯಾ ಪ್ರಕರಣವನ್ನು ದಾಖಲಿಸಿ, ಪ್ರಕರಣದ ದೂರು ಮತ್ತು ಎಫ್.ಐ.ಆರ್ ನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಅದರ ಪ್ರತಿಯನ್ನು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಈಗ ಸಾಕ್ಷಿ ನಿಪಿ–1 ರ ದೂರನ್ನು ನೋಡಿ, ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ–1(ಬಿ) ಎಂದು ಗುರುತಿಸಲಾಯಿತು. ಈಗ ಸಾಕ್ಷಿ ಎಫ್.ಐ.ಆರ್ ನ್ನು ನೋಡಿ, ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಎಫ್.ಐ.ಆರ್ ನ್ನು ನಿಪಿ–27 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–27(ಎ) ಎಂದು ಗುರುತಿಸಲಾಯಿತು.

3). ನಂತರ ಅದೇ ದಿನ ಮಧ್ಯಾಹ್ನ ಮಹಿಳಾ ಪೇದೆ–248 ಮತ್ತು ತನಿಖಾ ಸಹಾಯಕರೊಂದಿಗೆ ವಿಕ್ಟೋರಿಯಾ ಆಸ್ಪತ್ರೆಯ ಶವಾಗಾರಕ್ಕೆ ತೆರಳಿ ಮಧ್ಯಾಹ್ನ 14.30 ರಿಂದ 17.00 ಗಂಟೆಯವರೆಗೆ ಶವ ಮಹಜರನ್ನು ಮಾಡಿಸಿ, ನಂತರ ಮರಣೋತ್ತರ ಪರೀಕ್ಷೆಯನ್ನು ಮಾಡಿಸಿ, ಮೃತದೇಹವನ್ನು ಮೃತರ ಮನೆಯವರಿಗೆ ಮುಂದಿನ ಕ್ರಮಕ್ಕಾಗಿ ಹಸ್ತಾಂತರಿಸಿರುತ್ತೇನೆ. ಈಗ ಸಾಕ್ಷಿ ಶವ ಪಂಚನಾಮೆ ಮಹಜರನ್ನು ನೋಡುತ್ತಿದ್ದು ಅದು ಈಗಾಗಲೇ ನಿಪಿ–4 ಎಂದು ಗುರುತಿಸಲಾಗಿದ್ದು, ಸಾಕ್ಷಿ ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಿಪಿ–4(ಎ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಚಾಸಾ–2 ರಿಂದ 6 ಹಾಗೂ 8 ರಿಂದ 10 ರವರುಗಳ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

4). ನಂತರ ದಿನಾಂಕಃ10–01–2020 ರಂದು ಬೆಳಿಗ್ಗೆ 8.00 ಗಂಟೆಯಿಂದ 9.00 ಗಂಟೆಯವರೆಗೆ ಚಾಸಾ–1, ಚಾಸಾ–9 ಹಾಗೂ ಚಾಸಾ–10 ರವರ ಸಮಕ್ಷಮ ನಿಪಿ–3 ರಂತೆ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ಮಾಡಿರುತ್ತೇನೆ. ನಂತರ ಮಹಜರ್ ಕಾಲದಲ್ಲಿ ಚಾಸಾ–1 ರವರು ಒಂದು ಪ್ಲಾಸ್ಟಿಕ್ ಡಬ್ಬಿಯನ್ನು ತಂದುಕೊಟ್ಟಿದ್ದು, ಅದನ್ನು ಪಂಚರ ಸಮಕ್ಷಮ ವಶಕ್ಕೆ ಪಡೆದು, ನಂತರ ಠಾಣೆಗೆ ಹಿಂದಿರುಗಿ, ವಶಪಡಿಸಿಕೊಂಡ ಪ್ಲಾಸ್ಟಿಕ್ ಡಬ್ಬಿಗೆ ಠಾಣಾ ಮಾಲುಪಟ್ಟಿ ಸಂಖ್ಯೆಃ06/2020 ರಂತೆ ಅಳವಡಿಸಿರುತ್ತೇನೆ. ಈಗ ಸಾಕ್ಷಿ ಸದರಿ ಮಹಜರನ್ನು ನೋಡಿ ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಿಪಿ–3(ಸಿ) ಎಂದು ಗುರುತಿಸಲಾಯಿತು. ನಾನು ಚಾಸಾ–1 ರವರ ಮುಖಾಂತರ ವಶಪಡಿಸಿಕೊಂಡ ಪ್ಲಾಸ್ಟಿಕ್ ಡಬ್ಬಿಯನ್ನು ನೋಡಿ ಗುರುತಿಸಬಲ್ಲೆ, ಅದು ಈಗಾಗಲೇ ಮು.ಮಾ–1 ಎಂದು ಗುರುತಿಸಲಾಗಿರುತ್ತದೆ.

5). ನಂತರ ಅದೇ ದಿನ ರಾತ್ರಿ 20.00 ಗಂಟೆಗೆ ಫಿರ್ಯಾದಿದಾರರು ಠಾಣೆಗೆ ಹಾಜರಾಗಿ ಒಂದು ಮರು ದೂರನ್ನು ನಿಪಿ–2 ರಂತೆ ನೀಡಿದ್ದು, ಅದನ್ನು ಈಗಾಗಲೇ ದಾಖಲಾಗಿದ್ದ ಪ್ರಕರಣ ಸಂಖ್ಯೆ:10/2020 ರ ಕಲಂ 354(ಡಿ) ಮತ್ತು 306 ನ್ನು ಕೈಬಿಟ್ಟು ಹಾಗೂ ಕಲಂ 302 ನ್ನು ಅಳವಡಿಸಿಕೊಳ್ಳುವಂತೆ ಕೋರಿ ಮಾನ್ಯ ನ್ಯಾಯಾಲಯಕ್ಕೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ. ಈಗ ಸಾಕ್ಷಿ ಸದರಿ ಮರು ದೂರನ್ನು ನೋಡಿ, ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು. ಈಗ ಸಾಕ್ಷಿ ಘನ ನ್ಯಾಯಾಲಯಕ್ಕೆ ನೀಡಿದ ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–28 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–28(ಎ) ಎಂದು ಗುರುತಿಸಲಾಯಿತು. ಈ ಪ್ರಕರಣವು ಘೋರ ಪ್ರಕರಣವಾಗಿದ್ದರಿಂದ ಚಾಸಾ–35 ರವರಿಗೆ ಹಸ್ತಾಂತರಿಸಿರುತ್ತೇನೆ.

6). ನಂತರ ದಿನಾಂಕ:12–01–2020 ರಂದು ಚಾಸಾ–35 ರವರು ಆರೋಪಿಯ ಪತ್ತೆಗಾಗಿ ನನಗೆ ಜ್ಞಾಪನಾ ಪತ್ರವನ್ನು ನೀಡಿದ್ದು, ಅದರಂತೆ ನಾನು ಚಾಸಾ–32 ಹಾಗೂ ಚಾಸಾ–33 ರವರ ಸಹಾಯದಿಂದ ಆರೋಪಿಯು ತೊಂಡೇಭಾವಿ ರೈಲ್ವೇ ನಿಲ್ದಾಣದ ಬಳಿ ಇರುವ ಮಾಹಿತಿಯನ್ನು ಪಡೆದು, ಅಲ್ಲಿಗೆ 11.00 ಗಂಟೆಗೆ ತೆರಳಿ ಆರೋಪಿಯನ್ನು ವಶಕ್ಕೆ ಪಡೆದು ಚಾಸಾ–35 ರವರ ಮುಂದೆ 11.30 ಗಂಟೆಗೆ ವರದಿಯೊಂದಿಗೆ ಹಾಜರುಪಡಿಸಿರುತ್ತೇನೆ. ಈಗ ಸಾಕ್ಷಿ ಸದರಿ ವರದಿಯನ್ನು ನೋಡಿ ಗುರುತಿಸಿದ್ದು, ಸದರಿ ವರದಿಯನ್ನು ನಿಪಿ–29 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–29(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಚಾಸಾ–9 ರವರು ನಿಪಿ–8 ರಂತೆ ನನ್ನ ಮುಂದೆ ಹೇಳಿಕೆಯನ್ನು ನೀಡಿರುತ್ತಾರೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಕೆ.ಎಸ್.ಎನ್ ವಕೀಲರಿಂದಃ**

7). ಚಾಸಾ–1 ರವರು ನಮ್ಮ ಠಾಣೆಗೆ ಬಂದು ನಿಪಿ–1 ಮತ್ತು 2 ರಂತೆ ದೂರು ಹಾಗೂ ಮರುದೂರನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ–9 ಮತ್ತು ಚಾಸಾ–10 ರವರಿಗೆ ಪಂಚರಾಗಿ ಬರಬೇಕು ಎಂದು ನಾನು ಯಾವುದೇ ನೋಟೀಸ್ಸನ್ನು ಜಾರಿ ಮಾಡಿರುವುದಿಲ್ಲ. ನಿಪಿ–3 ರಂತೆ ನಾನು ಒಂದು ಚಿಕ್ಕ ಪ್ಲಾಸ್ಟಿಕ್ ಡಬ್ಬಿಯನ್ನು ವಶಕ್ಕೆ ಪಡೆದುಕೊಂಡಿರುತ್ತೇನೆ. ನಿಪಿ–3 ರ ಮಹಜರ್ ಮಾಡುವ ಸಮಯದಲ್ಲಿ ಸದರಿ ಚಿಕ್ಕ ಪ್ಲಾಸ್ಟಿಕ್ ಡಬ್ಬಿಯನ್ನು ಎಲ್ಲಿಂದ ಖರೀಧಿ ಮಾಡಿರುತ್ತಾರೆ ಎಂಬ ಬಗ್ಗೆ ನಾನು ತನಿಖೆ ಮಾಡಿರುವುದಿಲ್ಲ. ಸಾಕ್ಷಿ ಸ್ವಇಚ್ಚೆಯಿಂದ ಸದರಿ ಚಿಕ್ಕ ಪ್ಲಾಸ್ಟಿಕ್ ಡಬ್ಬಿಯನ್ನು ಚಾಸಾ–1 ರವರು ತಂದು ಕೊಟ್ಟಿದ್ದು, ಅದನ್ನು ನಿಪಿ–3 ರಂತೆ ವಶಕ್ಕೆ ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಚಾಸಾ–1 ನನ್ನ ಮುಂದೆ ಮು.ಮಾ–1 ನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–3 ರ ಮಹಜರನ್ನು ನಾನು ಠಾಣೆಯಲ್ಲಿ ಸೃಷ್ಟಿಸಿರುತ್ತೇನೆ ಹಾಗೂ ಕೃತ್ಯ ನಡೆದ ಸ್ಥಳ ಎಂದು ಹೇಳಲಾದ ಸ್ಥಳಕ್ಕೆ ನಾನು ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

8). ಚಾಸಾ–35 ರವರು ಆರೋಪಿಯ ಚಹರೆಯ ಬಗ್ಗೆ ವಿವರಣೆ ಅಥವಾ ಫೋಟೋವನ್ನು ನೀಡಿರುವುದಿಲ್ಲ. ಸಾಕ್ಷಿ ಸ್ವಇಚ್ಚೆಯಿಂದ ಆರೋಪಿಯ ಪತ್ತೆಗಾಗಿ ಜ್ಞಾಪನಾ ಪತ್ರವನ್ನು ಮಾತ್ರ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಫಿರ್ಯಾದಿ ಠಾಣೆಗೆ ಬಂದು ದೂರು ನೀಡಿದ ನಂತರ ಆರೋಪಿರವರ ಮನೆಗೆ ನಾನು ಹೋಗಿರುವುದಿಲ್ಲ. ಸಾಕ್ಷಿ ಸ್ವಇಚ್ಚೆಯಿಂದ ನನ್ನ ಸಿಬ್ಬಂದಿಯನ್ನು ಆರೋಪಿಯ ಮನೆಗೆ ಕಳುಹಿಸಿಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿಯನ್ನು ತೊಂಡೇಭಾವಿ ರೇಲ್ವೇ ನಿಲ್ದಾಣದ ಬಳಿ ವಶಕ್ಕೆ ಪಡೆದಿರುವುದಿಲ್ಲ, ಆತನು ತನ್ನ ಮನೆಯಲ್ಲಿದ್ದು, ಆತನನ್ನು ಕರೆದುಕೊಂಡು ಬಂದು ಚಾಸಾ–35 ರವರ ಮುಂದೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಕೃತ್ಯಕ್ಕೂ

ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಕೂಡ ಫಿರ್ಯಾದಿಯ ಮಾತನ್ನು ಕೇಳಿ ಸುಳ್ಳು ಫಿರ್ಯಾದಿಯನ್ನು ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
Sd/-
**(ಎನ್.ವಿ. ಭವಾನಿ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.